**ದಿನಾಂಕಃ 22-08-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಎಮ್ ಎಸ್ ಎ ವಕೀಲರಿಂದಃ**

ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ -14 ಎಂದು, ಡಿಸ್ಚಾರ್ಜ ಸಮ್ಮರಿಯನ್ನು ನಿ ಪಿ -15 ಎಂದು, ಒಂದು ಬಿಲ್ಲನ್ನು ನಿ ಪಿ -16 ಎಂದು, ಒಪಿಡಿ ಯನ್ನು ನಿ ಪಿ -17 ಎಂದು, ಅಂಗನ್ಯೂನತ ಪ್ರಮಾಣ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಪಿ 18 ಎಂದು, ಎರಡು ಎಕ್ಸರೆ ಪಿಲಂ/ಕ್ಷ-ಕಿರಣ ಫಿಲಂಗಳನ್ನು ಕೊಟ್ಟಿದ್ದು ಅವುಗಳನ್ನು ಒಟ್ಟಾಗಿ ನಿ ಪಿ 19 ಎಂದು ಗುರುತಿಸಲಾಯಿತು. ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನ್ ಕಾರ್ಡ ಮೂಲ ದಾಖಲೆಗಳ ಜೊತೆ ಅವುಗಳ ನೋಟರಿ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಮೂಲ ದಾಖಲೆಗಳ ಜೊತೆ ಪರಿಶೀಲಿಸಿದ ನಂತರ ಸದರಿ ದಾಖಲೆಗಳು ದಿನ ಬಳಕೆಗೆ ಬೇಕಾಗಿರುವುದರಿಂದ ಅವುಗಳ ನೋಟರಿ ಪ್ರತಿಗಳನ್ನು ನಿ ಪಿ-20 ಮತ್ತು ನಿ ಪಿ- 21 ಎಂದು ಗುರುತಿಸಲಾಯಿತು. ಅರ್ಜಿದಾರರ ಮೂಲ ಆದಾರ ಕಾರ್ಡ, ಪ್ಯಾನ್ ಕಾರ್ಡ ಗಳನ್ನು ಅರ್ಜಿದಾರರಿಗೆ ಹಿಂದುರಿಗಿಸಲಾಯಿತು.

ಅರ್ಜಿಯಲ್ಲಿ ಕೇಳಿದಂತೆ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಸಹಿ/-

(ಶ್ರೀಮತಿ ಹುಲ್ಲೂರ ಹೇಮಲತಾ ಬಸಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.